ದಿನಾಂಕಃ **12-08-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರಿಂದ,**

1) ನನ್ನ ಲಿಖಿತ ತಕರಾರಿನಲ್ಲಿ ತಿಳಿಸಿರುವಂತೆ ಐದು ಲಕ್ಷ ಹಣವನ್ನು ಸಾಲವಾಗಿ ಪಡೆದುಕೊಂಡಿರುತ್ತೇನೆ ಎಂದು ತೋರಿಸಲು ಲಿಖಿತ ದಾಖಲೆ ಇರುವುದಿಲ್ಲ. ವಾದಿ ಸಾಕ್ಷಿದಾರರ ಮೂಲಕ ನನಗೆ ಹೆಚ್ಚಿನ ಬಡ್ಡಿ ಬೇಕುನು ಕ್ರಮ ಕೈಗೊಂಡಿರುವುದಿಲ್ಲ. ಕರಾರು ಪತ್ರದಲ್ಲಿ ಬಡ್ಡಿಗಾಗಿ ಹಣ ಪಡೆಯಲಾಗಿದೆ ಎಂದು ನಮೂದು ಮಾಡಿರುವುದಿಲ್ಲ. ನಾನು ಮತ್ತು ನನ್ನ ತಾಯಿ, ವಾದಿಯಿಂದ 14 ಲಕ್ಷ ಹಣ ಪಡೆದುಕೊಂಡು ಕುಟುಂಬದ ಅವಶ್ಯಕತೆಗಾಗಿ ಉಪಯೋಗಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ಕುಟುಂಬದ ಮೇಲ್ವಿಚಾರಣೆಯನ್ನು ನಾನು ಮತ್ತು ನನ್ನ ತಾಯಿ ನಿರ್ವಹಿಸುತ್ತೇವೆ ಎಂದರೆ ಸರಿಯಲ್ಲ. ವಾದಿಯು ಈ ದಾವೆ ಸಲ್ಲಿಸಿದ ನಂತರ ನನ್ನ ಸಹೋದರ ಪ್ರಸನ್ನಕುಮಾರ್ ರವರ ಮೂಲಕ ವಿಭಾಗದ ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.

2) ದಿಃ 23-06-2020 ರಂದು ನನ್ನ ತಾಯಿ ಗುಳಿವಿನಅತ್ತಿಗುಪ್ಪೆ ಗ್ರಾಮದ ಸರ್ವೆ ನಂ. 3/1, 110 ರಲ್ಲಿ ಐದು ಎಕರೆ 2 ಗುಂಟೆ, 111/1 ರಲ್ಲಿ ಎರಡು ಎಕರೆ 12 ಗುಂಟೆ ಜಮೀನುಗಳನ್ನು ಹಕ್ಕು ಬಿಡುಗಡೆ ಮೂಲಕ ನನಗೆ ಬಿಟ್ಟು ಕೊಟ್ಟಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಈ ಹಂತದಲ್ಲಿ ಸದರಿ ಹಕ್ಕು ಬಿಡುಗಡೆ ಪತ್ರವನ್ನು ತೋರಿಸಿದಾಗ ಒಪ್ಪಿಕೊಂಡ ಕಾರಣ ಸದರಿ ದಾಖಲೆಯನ್ನು ನಿಪಿ 13 ಎಂದು ಗುರುತಿಸಲಾಯಿತು. ನನ್ನ ಸಹೋದರ ಗೋವಿಂದೇಗೌಡ ರವರಿಗೆ ನನ್ನ ತಾಯಿ ದಿಃ 18-07-2016 ರಂದು ಸರ್ವೆ ನಂ.6/1 21 ಗುಂಟೆ, ಸರ್ವೆ ನಂ. 111/1 ರ ನಾಲ್ಕು ಎಕರೆ 20 ಗುಂಟೆ, ಸರ್ವೆ ನಂ. 111/6 ರಲ್ಲಿ 16 ಗುಂಟೆ ಸ್ವತ್ತನ್ನು ಹಕ್ಕು ಬಿಡುಗಡೆ ಮಾಡಿಕೊಟ್ಟ ಬಗ್ಗೆ ನನಗೆ ಗೊತ್ತಿಲ್ಲ. ಸರ್ವೆ ನಂ.111/9 ಈ ಹಿಂದೆ 111/2 ಆಗಿತ್ತು ಎಂದರೆ ನನಗೆ ಗೊತ್ತಿಲ್ಲ.

3) ವಾದಿಗೆ ಮೋಸ ಮಾಡುವ ಉದ್ದೇಶದಿಂದ ವಾದಿಯ ಹೆಸರಿಗೆ ಕರಾರು ಪತ್ರ ಆದ ನಂತರ ನಾನು ಮತ್ತು ನನ್ನ ತಾಯಿ ಸರ್ವೆ ನಂ. 111/2 ನ್ನು 111/9 ಎಂದು ಪೋಡು ಮಾಡಿ ಹಕ್ಕು ಬಿಡುಗಡೆ ಮಾಡಿಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ವಾದಿ ಪರವಾಗಿ ಆನ್ ಡಿಮ್ಯಾಂಡ್ ದಾಖಲೆ ಬರೆದುಕೊಟ್ಟ ಛಾಪಾ ಕಾಗದವನ್ನು ನವನಗರ ಅರ್ಬನ್ ಬ್ಯಾಂಕಿನಿಂದ ಖರೀದಿ ಮಾಡಿರುತ್ತೇನೆ. ವಾದಿಗೆ ನಾನು ಐದು ಲಕ್ಷ ಹಣವನ್ನು ಮರುಪಾವತಿ ಮಾಡಿರುತ್ತೇನೆ ಆದರೆ ನಿಖರವಾದ ದಿನಾಂಕ ನೆನಪಿರುವುದಿಲ್ಲ. ಅದೇ ದಿನ ಬಡ್ಡಿ ಹಣ ಮೂರು ಲಕ್ಷ ಪಾವತಿ ಮಾಡಿರುತ್ತೇನೆ. ವಾದಿಗೆ ಮರುಪಾವತಿ ಮಾಡಿದ ಎಂಟು ಲಕ್ಷ ನೀಡಿದ ಬಗ್ಗೆ ಬರವಣಿಗೆ ಆಗಿರುವುದಿಲ್ಲ ಆದರೆ ಸಾಕ್ಷಿದಾರರು ಇದ್ದರು. ಹಣ ಮರುಪಾವತಿ ಮಾಡಿದ ನಂತರ ವಾದಿ ಹೆಸರಿನಲ್ಲಿರುವ ಕರಾರು ಪತ್ರವನ್ನು ರದ್ದು ಪಡಿಸಲು ನೋಟೀಸು ನೀಡಿರುವುದಿಲ್ಲ. ವಾದಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ಪರವಾಗಿ ಕ್ರಮಬದ್ಧವಾದ ಕ್ರಯ ಪತ್ರವನ್ನು ಬರೆದುಕೊಟ್ಟಿದ್ದರೂ ಸಹ ಬರೆದುಕೊಟ್ಟಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ